DFA/1060322

## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 19 (60)
2. ಸದಸ್ಯರ ಹೆಸರು : ಡಾ.ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 13.02.2023
4. ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಿದ್ವಾಯಿ ಕ್ಯಾನ್ಸರ್ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಅಸ್ಥಿ ಮಜ್ಜೆ (ಬೋನ್ ಮ್ಯಾರೋ) ಕಸಿ ಶಸ್ತ್ರ ಚಿಕಿತ್ಸೆ ಆರಂಭಿಸಿ ಒಂದು ವರ್ಷವಾಗುತ್ತಾ ಬಂದರೂ ಇಲ್ಲಿಗೆ ಆಗಮಿಸುವ ರೋಗಿಗಳ ಚಿಕಿತಾ ವೆಚ್ಚಕ್ಕೆ ಸರ್ಕಾರದಿಂದ ಅನುದಾನ ಲಭ್ಯವಾಗಿಲ್ಲವೆಂದು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ಥಿ ಮಜ್ಜೆ (ಬೋನ್ ಮ್ಯಾರೋ) ಕಸಿ ಶಸ್ತ್ರ ಚಿಕಿತ್ಸೆಯನ್ನು ಏಪ್ರಿಲ್ 2022 ರಿಂದ (ಸುಮಾರು 08 ತಿಂಗಳುಗಳಿಂದ) ಪ್ರಾರಂಭಿಸಲಾಗಿದ್ದು, ಈ ಚಿಕಿತ್ಸೆಯನ್ನು ನೀಡಲು ಇದುವರೆವಿಗೆ ಒಟ್ಟು 24 ರೋಗಿಗಳಿಗೆ ಆಟೋಲೋಗಸ್ ಟ್ರಾನ್ಸ್ ಪ್ಲಾಂಟ್ ಅಸ್ಥಿ ಮಜ್ಜೆ ಚಿಕಿತ್ಸೆಯನ್ನು ಉಚಿತವಾಗಿ ರಾಜ್ಯ ಸರ್ಕಾರದ ವಿವಿಧ ಯೋಜನೆ (ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಮತ್ತು ರೇರ್ ಡಿಸೀಸ್)ಗಳ ಅಡಿಯಲ್ಲಿ ಹಾಗೂ ಪ್ರಧಾನ ಮಂತ್ರಿ ಪರಿಹಾರ ನಿಧಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ರೋಗಿಗಳ ಕಲ್ಯಾಣ ನಿಧಿ, ಮುಖ್ಯಮಂತ್ರಿಗಳ ವೈದ್ಯಕೀಯ ವೆಚ್ಚ ಮರುಪಾವತಿ ನಿಧಿಯಿಂದ ಸಂಪೂರ್ಣವಾಗಿ ಉಚಿತ ಚಿಕಿತ್ಸೆಯನ್ನು ನೀಡಲಾಗಿದೆ ಹಾಗೂ 19 ರೋಗಿಗಳು ವಿವಿಧ ಹಂತದಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿದ್ದು, ರೋಗಿಗಳಿಗೆ ಸ್ಟೆಮ್ ಸೆಲ್ ಸಂಗ್ರಹಿಸಲಾಗಿದೆ. ವೈದ್ಯರು ನಿರ್ಧರಿಸಿದ ಸೂಕ್ತ ಸಮಯದಲ್ಲಿ ಅಸ್ಥಿ ಮಜ್ಜೆ ಚಿಕಿತ್ಸೆ ನೀಡಲಾಗುವುದು.<br><br>ಯಾವ ರೋಗಿಯೂ ಸಹ ಅನುದಾನದ ಅಲಭ್ಯತೆಯಿಂದ ಚಿಕಿತ್ಸೆ ದೊರೆಯದೇ ಇರುವುದಿಲ್ಲ. ಬಿಎಂಟಿ (ಅಸ್ಥಿಮಜ್ಜೆ ಚಿಕಿತ್ಸೆ) ಹಂತ ಹಂತವಾಗಿ ವೈದ್ಯರ ಸಲಹೆ ಮೇರೆಗೆ ನಡೆಯಬೇಕಾಗಿರುತ್ತದೆ. |
| (ಆ) | ಬಂದಿದ್ದಲ್ಲಿ ಅಸ್ಥಿ ಮಜ್ಜೆ ಚಿಕಿತ್ಸೆಗೆ ತಿಂಗಳುಗಳಿಂದ ಕಾಯುತ್ತಿರುವ ಕ್ಯಾನ್ಸರ್ ರೋಗಿಗಳ ನೆರವಿಗೆ ಸರ್ಕಾರ ಯಾವ ರೀತಿ ಸ್ಪಂದಿಸುತ್ತಿದೆ; (ವಿವರ ನೀಡುವುದು) | ಅಸ್ಥಿಮಜ್ಜೆ ಟ್ರಾನ್ಸ್ ಪ್ಲಾಂಟ್ ಚಿಕಿತ್ಸೆಯನ್ನು ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ, ರೇರ್ ಡಿಸೀಸ್, ಪ್ರಧಾನ ಮಂತ್ರಿ ಪರಿಹಾರ ನಿಧಿ ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ರೋಗಿಗಳ ಕಲ್ಯಾಣ ನಿಧಿ, ಮುಖ್ಯಮಂತ್ರಿಗಳ ವೈದ್ಯಕೀಯ ವೆಚ್ಚ ಮರುಪಾವತಿ ನಿಧಿಯ ಸಹಾಯದಿಂದ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಇದಲ್ಲದೇ, ರೇರ್ ಡಿಸೀಸ್ ಯೋಜನೆ ಅಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೋಗಿಗಳಿಗೆ ಅಸ್ಥಿ ಮಜ್ಜೆ (ಆಟೋಲೋಗಸ್ ಮತ್ತು ಅಲೋಜೆನಿಕ್ ಟ್ರಾನ್ಸ್ ಪ್ಲಾಂಟ್) ಚಿಕಿತ್ಸೆಯನ್ನು ಸಂಪೂರ್ಣ ಉಚಿತವಾಗಿ |



Generated from eOffice by Dr K SUDHAKAR, MED-MIN(SK), MINISTER, MEDICAL EDUCATION SEC on 09/02/2023 01:01 PM

322

| | | |
|---|---|---|
| | | ನೀಡಲು ತೀರ್ಮಾನಿಸಲಾಗಿದೆ ಹಾಗೂ ಇದರ ಅನುಕೂಲವನ್ನು ಈಗಾಗಲೇ ಹಲವಾರು ರೋಗಿಗಳು ಪಡೆದಿರುತ್ತಾರೆ. |
| (ಇ) | ಈ ಚಿಕಿತ್ಸೆ ಅತ್ಯಂತ ದುಬಾರಿಯಾಗಿದ್ದು, ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ಬಡರೋಗಿಗಳು ನೋಂದಣಿ ಮಾಡಿಸಿ ತಿಂಗಳುಗಳಿಂದ ಕಾಯುತ್ತಿದ್ದು, ಸರ್ಕಾರ ಕೂಡಲೇ ಅವರ ನೆರವಿಗೆ ಧಾವಿಸಲು ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು) | ಆಟೋಲೋಗಸ್ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆಗೆ ರೂ.6.00 ಲಕ್ಷ ದಿಂದ ರೂ.9.00 ಲಕ್ಷ ವೆಚ್ಚ ಹಾಗೂ ಆಲೋಜೆನಿಕ್ ಟ್ರಾನ್ಸ್ ಪ್ಲಾಂಟ್ ಚಿಕಿತ್ಸೆಗೆ ರೂ.20.00 ಲಕ್ಷದಿಂದ ರೂ.25.00 ಲಕ್ಷ ರೂಪಾಯಿಗಳ ವೆಚ್ಚ ತಗಲುತ್ತದೆ. ಪ್ರತಿ ರೋಗಿಗಳ ಆರೋಗ್ಯ ಸ್ಥಿತಿಗತಿಯ ಅನುಗುಣವಾಗಿ ಹಾಗೂ ಬಹಳ ಅಗತ್ಯವಿದ್ದಲ್ಲಿ ಅಸ್ಥಿ ಮಜ್ಜೆ ಚಿಕಿತ್ಸೆ ಮಾಡಲು ವೈದ್ಯರು ನಿರ್ಧರಿಸುತ್ತಾರೆ. ಪ್ರತಿ ರೋಗಿಯ ಆರೋಗ್ಯ ಸ್ಥಿತಿ-ಗತಿಯನ್ನು ಪರಿಶೀಲಿಸಿ ಅಸ್ಥಿ ಮಜ್ಜೆ ಟ್ರಾನ್ಸ್ ಪ್ಲಾಂಟ್‌ಗೆ ಕ್ರಮ ತೆಗೆದುಕೊಳ್ಳಲಾಗುವುದು. |

ಸಂಖ್ಯೆ: ಎಂಇಡಿ 36 ಕೆಯುಎಂ 2023

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.



Generated from eOffice by DR K SUDHAKAR, MED-(MINISK) MINISTER, MEDICAL EDUCATION SEC on 09/02/2023 05:01 PM